ಚಾಮರಾಜನಗರ, ಕೆಲವು ಕಡೆ ಪ್ರದೇಶಗಳಿಗೆಲ್ಲ ಹೋಗಿದ್ದೆವು. ಆದರ ಬಗ್ಗೆ ನಮ್ಮ ತಕರಾರು ಇಲ್ಲ. ನೀವು ಬೇಗ ಹಿಡಿಯುವುದಕ್ಕೆ ನಿಮ್ಮಲ್ಲಿ ವ್ಯವಸ್ಥೆ ಇದೆ. ಹಿಂದಿನ ಸಾರಿ ಚರ್ಚೆ ನಡೆಯುವಾಗ ಇನ್ನೇನು ಎರಡು ಗಂಟೆಯಲ್ಲಿ ಹಿಡಿದುಬಿಡುತ್ತಾರೆ, ಮೂರು ಗಂಟೆಯಲ್ಲಿ ಹಿಡಿಯುತ್ತಾರೆ ಎನ್ನುವ ಸುದ್ದಿ ಹುಟ್ಟಿ ಇನ್ನೇನು ಹಿಡಿದೇಬಿಟ್ಟರ ಬಹುದು ಎನ್ನತಕ್ಕಂಥ ಒಂದು ವಾತಾವರಣ ನಿರ್ಮಾಣವಾಗಿತ್ತು. ನನಗನ್ನಿತ್ತದೆ, ನಾವು ಇವತ್ತು ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ತಮಿಳುನಾಡು ಮತ್ತು ಕರ್ನಾಟಕದ ನಡುವೆ ಈ ವಿಚಾರದಲ್ಲಿ ಹೊಂದಾಣಿಕೆ ಇಲ್ಲ. ತಮಿಳುನಾಡು ಪೋಲೀಸರು ಮತ್ತು ಕರ್ನಾಟಕದ ಪೋಲೀಸರಲ್ಲಿ ಹೊಂದಾಣಿಕೆ ಇಲ್ಲ. ತಮಿಳು ನಾಡಿನ ಅರಣ್ಯ ಇಲಾಖೆ ಮತ್ತು ಕರ್ನಾಟಕದ ಪೋಲೀಸರಲ್ಲಿ ಹೊಂದಾಣಿಕೆ ಇಲ್ಲ. ತಮಿಳುನಾಡಿನ ಅರಣ್ಯ ಇಲಾಖೆ ಮತ್ತು ಕರ್ನಾಟಕದ ಅರಣ್ಯ ಇಲಾಖೆ ನಡುವೆ ಹೊಂದಾಣಿಕೆ ಇಲ್ಲ. ಈ ವ್ಯವಸ್ಥೆ ಇರುವಾಗ ಇನ್ನು ನೂರು ವರ್ಷವಾದರೂ, ಇದೇ ಪರಿಸ್ಥಿತಿ ನಿರ್ಮಾಣವಾದರೆ ಖಂಡಿತ ಹಿಡಿಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸುತ್ತೇನೆ.

ಉಪಾಧ್ಯಕ್ಷರು :- ಅಶೋಕ ಕಾಟ್ವೆ ಅವರು, ಎರಡು ನಿಮಿಷಗಳಲ್ಲಿ ನೀವು ಪ್ರಸ್ತಾಪ ಮಾಡಿಬಿಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ :- ನನಗೂ ಅವಕಾಶ ಕೊಡಿ.

ಉಪಾಧ್ಯಕ್ಷರು :- ನಂತರ ಅವಕಾಶ ಕೊಡುತ್ತೇನೆ. ಎಲ್ಲರೂ ಮಾತನಾಡಿದರೆ ಹೇಗೆ?

(ಋ) ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಬಂದ್ ಮಾಡುವು ದಾಗಿ ಹೇಳಿಕೆ ನೀಡಿರುವುದು.

ಶ್ರೀ ಅಶೋಕ್ ಕಾಟ್ವೆ :- ಮಾನ್ಯ ಉಪಾಧ್ಯಕ್ಷರೇ, ಆಗಸ್ಟ್ 1 ರಿಂದ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಬಂದ್ ಮಾಡುತ್ತೇವೆ ಎಂದು ಹೇಳಿ ಜಲಮಂಡಳಿಯ ಸೂಪರಿಟೆಂಡೆಂಟ್ ಇಂಜಿನಿಯರ್ ಅವರು ಒಂದು ಎಚ್ಚರಿಕೆಯ ಪತ್ರವನ್ನು ಬರೆದಿದ್ದಾರೆ. ಈ ಎಚ್ಚರಿಕೆಯ ಪತ್ರ ಇಂಗ್ಲೀಷಿನಲ್ಲಿದ್ದು ಅದನ್ನು ತಮ್ಮ ಕಡೆಗೆ ಕಳಿಸಿಕೊಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಈ ಪತ್ರ ಬರೆಯಲು ಈ ಅಭಿಯಂತರಿಗೆ ಅಧಿಕಾರ ನೀಡಿದವರು ಯಾರು? ಒಂದು ವೇಳೆ ಈ ಅಧಿಕಾರಿ ಸ್ವಇಚ್ಛೆಯಿಂದ ಈ ಪತ್ರ ಬರೆದಿದ್ದರೆ ಅವರು ಕೂಡಲೇ ರಾಜೀನಾಮೆ ಕೊಡಬೇಕು. ಸದರಿ ವಿಷಯದಲ್ಲಿ ರಾಜ್ಯಸರ್ಕಾರದಿಂದ ಯಾವುದಾದರೂ ನಿರ್ದೇಶನ ಅಧಿಕಾರಿಗೆ ಬಂದಿದೆಯೇ ಹೇಗೆ? ಎಲ್ಲ ಮಹಾನಗರಪಾಲಿಕೆಗಳಿಗೆ ಇದೇ ರೀತಿಯ ಪತ್ರ ಹೋಗಿದೆಯೇ ಅಥವಾ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಮಾತ್ರ ನೀಡಲಾಗಿದೆಯೇ ಎಂದು ಸರ್ಕಾರ ತಿಳಿಸಬೇಕು. ಈಗಾಗಲೇ ಜನತೆಗೆ ಮೂರು ದಿವಸಗಳಿಗೊಮ್ಮೆ ನೀರು ಕೊಡುತ್ತಿರುವಾಗ, ಈ ರೀತಿ ಬೆದರಿಗೆ ಪತ್ರ ಬಂದಿರುವುದರಿಂದ ಜನರು ಭಯಭೀತರಾಗಿದ್ದಾರೆ. 12 ಕೋಟಿ 50 ಲಕ್ಷ ರೂಪಾಯಿ ಬಾಕಿ ಇದೆಯೆಂದು ಹೇಳಿ, ಹಾಗೂ ರಾಜ್ಯಸರ್ಕಾರ ಜಕಾತಿ ಪರಿಹಾರ ಧನದಿಂದ ಕಡಿತ ಮಾಡಿದ ಹಣದಷ್ಟು ಜಲಮಂಡಳಿಯಲ್ಲಿ....

ಉಪಾಧ್ಯಕ್ಷರು :- ಪೇಪರ್ ಓದುವುದಲ್ಲ. ನಾನು ಮೊದಲೇ ಸಮಯ ಕೊಡುವುದಿಲ್ಲ ಎಂದು ಹೇಳಿದೆ. ಎರಡು ನಿಮಿಷದಲ್ಲಿ ಪ್ರಸ್ತಾಪ ಮಾಡುತ್ತೇನೆ ಎಂದು ಹೇಳಿದಿರಿ. ತಾವು ಮುಗಿಸಿಬಿಡಿ.

ಶ್ರೀ ಅಶೋಕ್ ಕಾಟ್ಟೆ :- ಆದ್ದರಿಂದ ಇದರ ಬಗ್ಗೆ.....

ಉಪಾಧ್ಯಕ್ಷರು :- ಮೊದಲು ಸಮಯ ಆಗುವುದಿಲ್ಲ ಎಂದು ನಾನು ಸ್ಪಷ್ಟವಾಗಿಯೇ ಹೇಳಿದೆ. ನೀವು ಎರಡು ನಿಮಿಷ ಅಂತ ಹೇಳಿದಿರಿ. ಪೇಪರ್ ಓದುತ್ತ ಕುಳಿತರೆ ಸಮಯ ಎಲ್ಲಿ ಸಾಕಾಗುತ್ತದೆ?

ಶ್ರೀ ಅಶೋಕ್ ಕಾಟ್ಟೆ :- ಈ ರೀತಿ ಬೆದರಿಕೆ ಕೊಟ್ಟಂಥ ಅಧಿಕಾರಿ ಮೇಲೆ ಯಾವಕ್ರಮ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು :- ಸರ್ಕಾರದ ಪರವಾಗಿ ಯಾರು ಹೇಳುತ್ತೀರಿ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :- ಈಗ ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಪಟ್ಟಹಾಗೆ ಹುಬ್ಬಳ್ಳಿ ನಗರಕ್ಕೆ ಏನು ತೊಂದರೆಯಾಗಿದೆ, ಅದನ್ನು ನೀಗಿಸತಕ್ಕಂಥ ಭರವಸೆಯನ್ನು ಸರ್ಕಾರ ಕೊಡುತ್ತದೆ. ನಾನು ಮೊನ್ನೆ ಹುಬ್ಬಳ್ಳಿಗೆ ಹೋಗಿದೆ. ಆಗ ಮಹಾಪೌರರು ಮತ್ತು ಶಾಸಕರು ಬಂದು ನನ್ನನ್ನು ಭೇಟ್ಟಿಯಾಗಿ ವಿಷಯವನ್ನು ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳ ಮತ್ತು ಸಂಬಂಧಪಟ್ಟ ಸಚಿವರ ಗಮನಕ್ಕೆ ಇದನ್ನು ತಂದು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಕಾಂತ ಬೆಲ್ಲದ :- ಅಧ್ಯಕ್ಷರೇ....

ಉಪಾಧ್ಯಕ್ಷರು :- ಮಂತ್ರಿಗಳು ಉತ್ತರ ಹೇಳಿದ್ದಾರೆ. ನಿಮಗೆ ಸಮಾಧಾನ ವಾಗುವ ರೀತಿಯಲ್ಲಿ ಅವರು ಉತ್ತರ ಹೇಳಿದ್ದಾರೆ, ಮತ್ತೇನು? ಸಚಿವರ ಹತ್ತಿರ ತಾವು ಹೋಗಿ ಮಾತನಾಡಿ.

ಶ್ರೀ ಚಂದ್ರಕಾಂತ ಬೆಲ್ಲದ್ :- ಮಾನ್ಯ ಉಪಾಧ್ಯಕ್ಷರೇ, ಈಗ ತಮಗೆ ಗೊತ್ತಿರುವ ಹಾಗೆ ಕರ್ನಾಟಕ ಜಲಮಂಡಳಿ ಮತ್ತು ಕೊಳಚೆ ಮಂಡಳಿ ಏನಿದೆ, ಅದು ಮಲಪ್ರಭ ಮೊದಲನೇಯ ಸ್ಟೇಟ್ ಏನು ಯೋಜನೆ ಮಾಡಿದೆ, ಅದಕ್ಕೆ ಜೀವವಿಮಾ ನಿಗಮದಿಂದ ಸಾಲ ಮಾಡಿ ಇವತ್ತು ನೀರನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಸರ್ಕಾರ ದವರು ನಡುವೆ ಬೇಕಾದಷ್ಟು ಹಳ್ಳಿಗಳಿಗೆ ನೀರು ಪೂರೈಸುತ್ತಿದ್ದೀರಿ. ನಡುವೆ ಬರುವ ಹಳ್ಳಿಗಳಿಗೆ ಕೊಡಲಿ ಅಂತ ಹೇಳ ಅದಕ್ಕೆ ಸಹಿತ ನಾವು ಒಪ್ಪಿಕೊಂಡಿದ್ದೇವೆ : ಅದರ ಮೇಲೆ ಸಾಲದ ಕಂತು, ಬಡ್ಡಿಯನ್ನು ಮಹಾನಗರಪಾಲಿಕೆಯೇ ಭರಿಸುತ್ತಿದೆ. ಇವತ್ತು ಜಲಮಂಡಳಿಗೆ ಕೊಡುವಂಥ ಹಣ ಏನಿದೆ, ನೀವು ಸರ್ಕಾರದವರು ಸರಿಯಾಗಿ ಅನುದಾನ ಏನು ಕೊಡಬೇಕಾಗಿದೆ, ಅದನ್ನು ಕೊಟ್ಟಿದ್ದರೆ ನಾವು ಜಲಮಂಡಳಿಗೆ

ಕೊಡುವುದಕ್ಕೆ ತೊಂದರೆ ಇರುತ್ತಿರಲಿಲ್ಲ. ಆದ್ದರಿಂದ ತಾವು ದಯವಿಟ್ಟು ಹೆಚ್ಚಿಗೆ ಹಣ ಕೊಡಬೇಕು. ಜಲಮಂಡಳಿಗೆ ಹಣ ಕೊಡಬೇಕು. ಜಲಮಂಡಳಿಗೆ ಹಣಕೊಟ್ಟರೆ, ಅವರು ಮುಂದಿನ ಕೆಲಸ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಹಣವನ್ನು ಸರ್ಕಾರ ಸರಿಯಾಗಿ ಬಿಡುಗಡೆ ಮಾಡುವುದು ಒಂದು, ಮತ್ತೆ ಒಂದನೇ ತಾರೀಖಿನಿಂದ ನೀರು ಬಂದಾಗದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಬೆಂಗಳೂರು ಬಿಟ್ಟರೆ ಇದು ಎರಡನೇ ಮಹಾನಗರ. ಆದ್ದರಿಂದ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಇದು ನಮ್ಮ ಕರ್ನಾಟಕ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ನಿಂದ ಸೂಪರಿಂಟೆಂಡೆಂಟ್ ಇಂಜಿನಿಯರ್ ಒಂದು ಲೆಟರ್ ಕಳಿಸಿದ್ದಾರೆ. ಬಲ್ಕ್ ವಾಟರ್ ಸಪ್ಲೈಗೆ ತಾವು ಹಣ ತುಂಬಬೇಕು, ಕಳೆದ ಮೂರು-ನಾಲ್ಕು ವರ್ಷಗಳಿಂದ ತುಂಬಿಲ್ಲ, ಅದಕ್ಕೋಸ್ಕರ ತಾವು ಹಣ ತುಂಬದಿದ್ದುದಕ್ಕೆ ನಮಗೆ ಮೇಂಟೇನ್ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿರತಕ್ಕಂಥ ಪತ್ರ ಅದು. ಅದು ಹುಬ್ಬಳ್ಳಿ ನಗರ ಕಾರ್ಪೋರೇಷನ್‌ಗೆ ಹೋಗಿರತಕ್ಕಂಥಾದ್ದು. ಇದರಲ್ಲಿ ನೀರು ನಿಲ್ಲಿಸುತ್ತೇವೆ ಎಂದು ಹೇಳಿಲ್ಲ. ನೀರು ನಿಲ್ಲಿಸಿಬಿಡುತ್ತೇವೆ ಎಂದು ಅವರು ಹೇಳಿಲ್ಲ. ಹಾಗೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ನಿಲ್ಲಿಸದೇ ಇರುವ ಹಾಗೆ ನಾವು ನೋಡಿಕೊಳ್ಳುತ್ತೇವೆ. ಒಬ್ಬ ಅಧಿಕಾರಿ ಪತ್ರ ಕಳಿಸಿದ ತಕ್ಷಣಕ್ಕೆ ನೀರು ಸಾಧ್ಯವಿಲ್ಲ. ಮೂರು-ನಾಲ್ಕು ವರ್ಷಗಳಿಂದ ಹಣ ಕಟ್ಟಿಲ್ಲ ಎನ್ನುವ ಉದ್ದೇಶದಿಂದ, ಸುಮ್ಮನೆ ಹಣ ಕಟ್ಟಿ, ಇಲ್ಲದಿದ್ದರೆ ಕಷ್ಟವಾಗುತ್ತದೆ ನಮಗೆ ಮೇಂಟನೆನ್ಸ್‌ಗೆ ಕಷ್ಟವಾಗುತ್ತದೆ ಎಂದು ಅವರು ಹೇಳಿದ್ದಾರೆ. ಇದರ ಬಗ್ಗೆ ನೀರು ನಿಲ್ಲಿಸುವುದಿಲ್ಲ ಮಾನ್ಯ ಸದಸ್ಯರು ಕಳವಳ ಪಟ್ಟುಕೊಳ್ಳಬೇಕಾಗಿಲ್ಲ.

ಉಪಾಧ್ಯಕ್ಷರು :- ಕೊನೆಯ ಒಂದು ಪ್ರಶ್ನೆಯನ್ನು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಪ್ರಸ್ತಾಪ ಮಾಡುತ್ತಾರೆ.

(ಎ) ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ನಿನಲ್ಲಿ ಶ್ರೀಮಾನ್ ಸುಬ್ಬೋಜಿರಾವ್ ರವರನ್ನೂ ಎವಿಕ್ಷನ್ ಮಾಡತಕ್ಕಂಥ ವಿಚಾರ

+ **ಶ್ರೀಮತಿ ಪ್ರಮೀಳಾ ನೇಸರ್ಗಿ** :- ಮೊನ್ನೆತಾನೇ ನಮ್ಮ ಉಪನಾಯಕರು ಹೆಬ್ಬಾಳದಲ್ಲಿ ಕೋರ್ಟು ಎಕ್ಸಿಕ್ಯೂಷನ್‌ನಲ್ಲಿ ಮನೆಗಳನ್ನು ನಿರ್ನಾಮ ಮಾಡಿದ ವಿಷಯವನ್ನು ಹೇಳಿದ್ದರು. ಈಗ ಮತ್ತೆ ಅದೇ ರೀತಿ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಶ್ರೀಮಾನ್ ಸುಬ್ಬೋಜಿರಾವ್ ಅವರನ್ನು ಎವಿಕ್ಷನ್ ಮಾಡತಕ್ಕಂಥ ಸಂದರ್ಭದಲ್ಲಿ ಪೋಲೀಸ್ ಭಾವಾ ಅವರು ಐದು ಲಕ್ಷ ರೂಪಾಯಿಗಳನ್ನು ಲೂಟಿ ಮಾಡಿ ಆ ಹಣವನ್ನು ತೆಗೆದುಕೊಂಡ ನಂತರ ಈ ಬಗ್ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಮಾನ್ಯ ಸುಬ್ಬಾಜಿರಾವ್ ಅವರಿಗೆ ಅವರ ಜಾತಿಯ ಹೆಸರು ಹಿಡಿದು ಅವರನ್ನು ಬಯ್ದು ಕಳಿಸಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿರಿಯೆಂದು ದಯವಿಟ್ಟು ಹೇಳಬೇಕು.